1	2	3
		ಸಾಹಿತ್ಯವನ್ನು ಪ್ರೋತ್ಸಾಹಿಸುವ ಕಾರ್ಯಕ್ರಮವನ್ನು ವಿವಿಧ ರೀತಿಯಲ್ಲಿ ಹಮ್ಮಿಕೊಂಡು ಕಾರ್ಯ ಗತಗೊಳಿಸುತ್ತದೆ

ಚಾಮರಾಜನಗರ ಜಿಲ್ಲಾ ವ್ಯಾಪ್ತಿಯ ಆಸ್ಪತ್ರೆಗಳಲ್ಲಿ ವೈದ್ಯರು ಮತ್ತು ಸಿಬ್ಬಂದಿಗಳ ಕೊರತೆ

148 (52) ಶ್ರೀ ಕೃಷ್ಣಮೂರ್ತಿ ಎ ಆರ್ (ಸಂತೇಮರಳ್ಳಿ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಾಮರಾಜನಗರ ಹಾಗೂ ಸಂತೇಮರಳ್ಳಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಗ್ರಾಮವಾರು ಆಸ್ಪತ್ರೆಗಳಾವುವು ಈ ಆಸ್ಪತ್ರೆಗಳಲ್ಲಿ ವೈದ್ಯರು ಹಾಗೂ ಸಿಬ್ಬಂದಿ ಪೂರ್ಣ ಪ್ರಮಾಣದಲ್ಲಿ ನೇಮಕ ಮಾಡಲಾಗಿದೆಯೇ ಇಲ್ಲದಿದ್ದಲ್ಲಿ ಯಾವ ಯಾವ ಆಸ್ಪತ್ರೆಗಳಲ್ಲಿ ವೈದ್ಯರು ಸೇರಿದಂತೆ ಯಾವ ಸಿಬ್ಬಂದಿಯ ಕೊರತೆ ಇದೆ

ಆ) ಸದರಿ ಆಸ್ಪತ್ರೆಗಳಲ್ಲಿ ಕೊರತೆ ಇರುವ ಸಿಬ್ಬಂದಿಗಳನ್ನು ತುಂಬದಿರಲು ಕಾರಣವೇನು ಹಾಗೂ ಈ ಸಿಬ್ಬಂದಿಗಳನ್ನು ಯಾವಾಗ ತುಂಬಲಾಗುವುದು

ಇ) ಮೇಲ್ಕಂಡ ಆಸ್ಪತ್ರೆಗಳು ಸ್ವಂತ ಕಟ್ಟಡದಲ್ಲಿ ನಡೆಯುತ್ತಿದೆಯೇ ಇಲ್ಲದಿದ್ದಲ್ಲಿ ಯಾವ ಯಾವ ಗ್ರಾಮದ ಆಸ್ಪತ್ರೆಗಳಿಗೆ ಕಟ್ಟಡ ಇರುವುದಿಲ್ಲ

ಈ) ಕಟ್ಟಡ ಇಲ್ಲದ ಆಸ್ಪತ್ರೆಗಳಿಗೆ ಕಟ್ಟಡ ಮಂಜೂರಾತಿಗಾಗಿ ಹಣ ಒದಗಿಸಲಾಗಿದೆಯೇ ಇಲ್ಲದಿದ್ದಲ್ಲಿ ಯಾವಾಗ ಸ್ವಂತ ಕಟ್ಟಡ ಹೊಂದಲು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಚಾಮರಾಜನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 11 ಗ್ರಾಮವಾರು ಆಸ್ಪತ್ರೆಗಳು ಇರುತ್ತವೆ ಸಂತೇಮಾರಹಳ್ಳಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 8 ಗ್ರಾಮವಾರು ಆಸ್ಪತ್ರೆಗಳು ಇರುತ್ತವೆ

ಅವುಗಳು ಈ ಕೆಳಕಂ[illegible] ಇರುತ್ತವೆ

ಕ್ರ ಸಂ	ಚಾಮರಾಜನಗ[illegible] ವಿಧಾನ ಸಭಾ ಕ್ಷೇ[illegible] ವ್ಯಾಪ್ತಿಯಲ್ಲಿ	ಸಂತೆಮರಹಳ್ಳಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ
1	ವೆಂಕಟಯ್ಯನ ಛತ್ರ	ಆಲೂರು
2	ಬೇಡಗುಳಿ	[illegible]ತೇಮಾರಳ್ಳಿ
3	ಉಡಿಗಾಲ	[illegible]ಲವಾಡಿ
4	ಅರಕಲವಾಡಿ	[illegible]ಂಗನೂರು
5	ಬಿಸಲವಾಡಿ	[illegible]ದಕವಾಡಿ
6	ಅರಳೀಕಟ್ಟೆ	[illegible]ಮ್ಮತ್ತೂರು
7	ಹರವೆ	[illegible]ೇರು

1	2	3
8	ಹರದನಹಳ್ಳಿ	ಹಳ್ಳಿಕೆರೆಹುಂಡಿ
9	ಪಣ್ಯದಹುಂಡಿ	
10	ಚಾಮರಾಜನಗರ	
11	ಕೊತ್ತಲವಾಡಿ	

ಆ) ಇಲಾಖಾ ನೇಮಕಾತಿ ಸಮಿತಿಯಿಂದ ಆಯ್ಕೆ ಪ್ರಕ್ರಿಯೆ ಮುಗಿಯುತ್ತಿದ್ದು ಸಧ್ಯದಲ್ಲಿಯೇ ನೇಮಕಾತಿ ಮಾಡಿ ತೈನಾತಿಸಲಾಗುವುದು

ಇ) ಅರಳೀಕಟ್ಟೆ ಆಸ್ಪತ್ರೆಯನ್ನು ಹೊರತುಪಡಿಸಿ, ಉಳಿದ ಎಲ್ಲಾ ಆಸ್ಪತ್ರೆಗಳು ಸ್ವಂತ ಕಟ್ಟಡದಲ್ಲಿ ನಡೆಯುತ್ತಿದೆ

ಈ) ಅರಳೀಕಟ್ಟೆ ಆಸ್ಪತ್ರೆ ಕಟ್ಟಡದ ಕಾಮಗಾರಿಗೆ ಒಟ್ಟು 174 ಲಕ್ಷಗಳ ಅನುದಾನ ಒದಗಿಸಲಾಗಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ 528 ಕ್ಕೆ ಅನುಬಂಧ

ಚಾಮರಾಜನಗರ ತಾಲ್ಲೂಕು ಸಂತೇಮರಳ್ಳಿ ವಿಧಾನಸಭಾ ಕ್ಷೇತ್ರ

ಕ್ರಮ ಸಂಖ್ಯೆ	ಪ್ರಾಥಮಿಕ ಆರೋಗ್ಯ ಕೇಂದ್ರದ ಹೆಸರು	ಖಾಲಿ ಇರುವ ಹುದ್ದೆ	
		ವೈದ್ಯರು	ವೈದ್ಯೇತರ
(1)	(2)	(3)	(4)
1	ಆಲೂರು	–	8
2	ಸಂತೇಮರಳ್ಳಿ	–	3
3	ಕಾಗಲವಾಡಿ	–	8
4	ಹೊಂಗದೂರು	–	4
5	ಚಂದಕವಾಡಿ	–	4
6	ಉಮ್ಮತ್ತೂರು	–	10
7	ಕುದೇರು	–	2
8	ಹಳ್ಳಿಕೆರೆ ಹುಂಡಿ	–	5
	ಒಟ್ಟು	–	44

ಚಾಮರಾಜನಗರ ವಿಧಾನಸಭಾ ಕ್ಷೇತ್ರ

ಕ್ರಮ ಸಂಖ್ಯೆ	ಪ್ರಾಥಮಿಕ ಆರೋಗ್ಯ ಕೇಂದ್ರದ ಹೆಸರು	ಖಾಲಿ ಇರುವ ಹುದ್ದೆ	
		ವೈದ್ಯರು	ವೈದ್ಯೇತರ
(1)	(2)	(3)	(4)
1	ವೆಂಕಟಯ್ಯನ ಛತ್ರ	–	6
2	ಬೇಡಗುಳಿ	–	6
3	ಉಡಿಗಾಲ	–	8
4	ಹರದನಹಳ್ಳಿ	–	4

1	2	3	4
5	ಪಣ್ಯದ ಹುಂಡಿ	–	5
6	ಸಾ ಆಸ್ಪತ್ರೆ, ಚಾಮರಾಜನಗರ	–	7
7	ಕೊತ್ತಲವಾಡಿ	–	6
8	ಅರಕಲವಾಡಿ	–	8
9	ಬಿಸಲವಾಡಿ	–	3
10	ಅರಳೀಕಟ್ಟೆ	–	8
11	ಹರಪೆ	–	7
	ಒಟ್ಟು	–	68

ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿ ಕುಡಿಯುವ ನೀರು ರಸ್ತೆಗಳ ಅಭಿವೃದ್ಧಿ

149 (529) ಶ್ರೀ ಕೃಷ್ಣಮೂರ್ತಿ ಎ ಆರ್ (ಸಂತೇಮರಳ್ಳಿ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಚಾಮರಾಜನಗರ ತಾಲ್ಲೂಕು ಹಾಗೂ ಸಂತೇಮರಹಳ್ಳಿ ಕ್ಷೇತ್ರದ ವ್ಯಾಪ್ತಿಯಲ್ಲಿ ಎಷ್ಟು ಕೊಳವೆ ಬಾವಿಗಳನ್ನು ತೆಗೆಯಲಾಗಿದೆ ಮಿನಿವಾಟರ್ ಟ್ಯಾಂಕ್ ಹಾಗೂ ಓವರ್ ಟ್ಯಾಂಕ್ ಸೌಲಭ್ಯಗಳನ್ನು ಹೊಂದದೆ ಇರುವ ಗ್ರಾಮಗಳು ಯಾವುವು ಹಾಲಿ ಕುಡಿಯುವ ನೀರಿಗಾಗಿ ಎಷ್ಟು ಕೊಳವೆ ಬಾವಿಗಳ ಬೇಡಿಕೆ ಇದೆ ಬೇಡಿಕೆಯನ್ನು ಯಾವಾಗ ಯಾವ ಯೋಜನೆಯಡಿ ಪೂರೈಸಲಾಗುವುದು

ಆ) 2001–2003ನೇ ಸಾಲಿನಿಂದ ಈವರೆಗೆ ಚಾಮರಾಜ ನಗರ ತಾಲ್ಲೂಕು ಹಾಗೂ ಸಂತೇಮರಹಳ್ಳಿ ಕ್ಷೇತ್ರಕ್ಕೆ ಒಳಪಡುವ ನಂಜನಗೂಡು ತಾಲ್ಲೂಕು ಸೇರಿದಂತೆ ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಯಾವ ಯಾವ ರಸ್ತೆಗಳು ಡಾಂಬರೀಕರಣಗೊಳಿಸಲಾಗಿದೆ ಯಾವ ಯಾವ ರಸ್ತೆಗಳು ಮೆಟ್ಲಿಂಗ್ ರಸ್ತೆಗಳಾಗಿವೆ ಹಾಗೂ ಅಭಿವೃದ್ಧಿಪಡಿಸಬೇಕಾಗಿರುವ ರಸ್ತೆಗಳು ಯಾವುವು

ಇ) ಸದರಿ ರಸ್ತೆಗಳ ಅಭಿವೃದ್ಧಿಗಾಗಿ ಯಾವ ಯೋಜನೆಯಡಿ ವಿವಿಧ ರಸ್ತೆಗಳಿಗೆ ಎಷ್ಟು ಹಣ ಮಂಜೂರಾಗಿದ್ದು ಎಷ್ಟು ಹಣ ಖರ್ಚು ಮಾಡಲಾಗಿದೆ

ಈ) ದುರಸ್ತಿ ಮಾಡಬೇಕಾಗಿರುವ ರಸ್ತೆಗಳು ಯಾವುವು ಈ ರಸ್ತೆಗಳನ್ನು ಯಾವ ಯೋಜನೆಯಡಿ ಎಂದು ದುರಸ್ತಿಗೊಳಿಸಲಾಗುವುದು?

ಶ್ರೀ ಎಂ ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಚಾಮರಾಜನಗರ ತಾಲ್ಲೂಕು ವ್ಯಾಪ್ತಿಯಲ್ಲಿ 2269 ಕೊಳವೆಬಾವಿಗಳನ್ನು ಕೊರೆದು ಕೈಪಂಪು ಅಳವಡಿಸಲಾಗಿದೆ ಈ ಪೈಕಿ ಸಂತೇಮರಹಳ್ಳಿ ಕ್ಷೆತ್ರದ ವ್ಯಾಪ್ತಿಯಲ್ಲಿ 731 ಕೊಳವೆ ಬಾವಿಗಳನ್ನು ಕೊರೆದು ಕೈಪಂಪು ಅಳವಡಿಸಲಾಗಿದೆ ಸದರಿ ಕ್ಷೇತ್ರದ ವ್ಯಾಪ್ತಿಯಲ್ಲಿ ಮಿನಿ ವಾಟರ್ ಟ್ಯಾಂಕ್ ಮತ್ತು ಓವರ್ ಹೆಡ್ ಟ್ಯಾಂಕ್ ಸೌಲಭ್ಯವಿರದ ಗ್ರಾಮಗಳನ್ನು ಅನುಬಂಧ– 1 ಮತ್ತು ಅನುಬಂಧ – 2 ರಲ್ಲಿ ನೀಡಲಾಗಿದೆ

ಆ) ಡಾಂಬರೀಕರಣ ರಸ್ತೆಗಳ ವಿವರಗಳನ್ನು ಅನುಬಂಧ– 3 ರಲ್ಲಿ ಹಾಗೂ ಮೆಟ್ಲಿಂಗ್ ರಸ್ತೆಗಳ ವಿವರಗಳನ್ನು ಅನುಬಂಧ– 4 ರಲ್ಲಿ ಮತ್ತು ಅಭಿವೃದ್ಧಿಪಡಿಸಬೇಕಾಗಿರುವ ರಸ್ತೆಗಳ ವಿವರಗಳನ್ನು ಅನುಬಂಧ– 5ರಲ್ಲಿ ನೀಡಲಾಗಿದೆ